ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ವಾಸಯೋಗ್ಯ ಪ್ರಮಾಣ ಪತ್ರ (OC) ಅವ್ಯವಹಾರ ಕುರಿತು

ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು) -

735 (776) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದ ನಗರಗಳಲ್ಲಿ ಬಹುಮಹಡಿ ಕಟ್ಟಡಗಳಿಗೆ ವಾಸಯೋಗ್ಯ ಪ್ರಮಾಣ ಪತ್ರ (OC) ನೀಡಲು ಇರುವ ನಿಯಮಗಳೇನು;

(ಆ) ಬಹುಮಹಡಿ ವಸತಿ ಸಂಕೀರ್ಣಗಳಿಗೆ ಅಗ್ನಿ ಶಾಮಕ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಪಡೆದ ಬಳಿಕ ಮಾತ್ರವೇ ವಾಸಯೋಗ್ಯ ಪ್ರಮಾಣ ಪತ್ರ (OC) ನೀಡಲಾಗುವುದೆ;

(ಇ) ರಾಜ್ಯದ ಹಲವಾರು ಬಹುಮಹಡಿ ಕಟ್ಟಡಗಳು ಅಕ್ರಮ ಅವ್ಯವಹಾರ, ಭ್ರಷ್ಟಾಚಾರ ಎಸಗುವ ಮೂಲಕ ವಾಸಯೋಗ್ಯ ಪ್ರಮಾಣ ಪತ್ರ (OC) ಪಡೆದುಕೊಂಡಿದ್ದು, ಈ ರೀತಿಯ ಅಕ್ರಮ ವಾಸಯೋಗ್ಯ ಪ್ರಮಾಣ ಪತ್ರ (OC) ದಿಂದಾಗಿ ಆದ ಅವಘಡಗಳಿಂದ ಪ್ರಾಣ ಹಾನಿಯಾದಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ; ಈ ಕುರಿತು ಸರ್ಕಾರದ ನಿಲುವೇನು?